3. ಈ ಯೋಜನೆಗೆ ಹಿಂದಿನ ಮುಖ್ಯಮಂತ್ರಿಯವರು ಮಂಜೂರಾತಿಕೊಡುವ ಸಲುವಾಗಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಇಡಲು ಆದೇಶ ನೀಡಿದ ಸಂಗತಿ ನಿಜವೇ?

4. ಹಾಗಿದ್ದಲ್ಲಿ, ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಇಟ್ಟು ಮಂಜೂರಾತಿ ಪಡೆಯಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಹೌದು, ತಯಾರಿಸಲಾಗಿದೆ. ಸದರಿ ಯೋಜನೆಯನ್ನು 1998-99ನೇ ಸಾಲಿನಲ್ಲಿ ತಯಾರಿಸಲಾಗಿದೆ.

2. ಈ ಯೋಜನೆ 589,00 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಿದ್ದು, ಯೋಜನಾ ವೆಚ್ಚದ ಶೇ. 20ರಷ್ಟು ಅಂದರೆ 117.80 ಲಕ್ಷ ರೂ.ಗಳನ್ನು ಪುರಸಭೆಯ ವಂತಿಗೆಯಾಗಿ ತುಂಬಲು ಪುರಸಭೆಗೆ ತಿಳಿಸಲಾಗಿದೆ. ಇದನ್ನು ತುಂಬಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು

3. ಸರ್ಕಾರದ ಗಮನಕ್ಕೆ ಬಂದಿಲ್ಲ.

4. ಮೇಲೆ 2ರಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶದ ಬಡಜನರಿಗೆ ಆಹಾರ ಪಡಿತರ ಚೀಟಿ.

2369(3406) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಸಿರು ಕಾರ್ಡ್ ವಿತರಣೆ ಕೇವಲ ಕೊಳಚೆ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದಲ್ಲಿನ ಬಡ ಜನರಿಗೆ ಮಾತ್ರ ನೀಡಲಾಗುತ್ತಿರುವುದು ನಿಜವಲ್ಲವೇ?

ಆ) ಬಡಜನರು ನಗರ ಪ್ರದೇಶಗಳಲ್ಲಿ ಇಲ್ಲವೆ; ಇವರ ಬಗ್ಗೆ ಸರ್ಕಾರದ ಚಿಂತನೆ ಏನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) -ಹೌದು-

ಆ) ಇದ್ದಾರೆ

೨) ನಗರ : ಪಟ್ಟಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬಡಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವುದನ್ನು ಗಮನಿಸಿ, ಸದರಿ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿ ಹಾಗೂ ವಾರ್ಷಿಕ ಆದಾಯ ರೂ. 11,850-00ಕ್ಕಿಂತ ಕಡಿಮೆ ಇರುವ ಕುಟುಂಬಗಳಿಗೆ ಹಸಿರು ಪಡಿತರ ಚೀಟಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಆಸಾಸ : 06 ಡಿಆರ್‌ಎ : 2000ರ ದಿನಾಂಕ: 1.2.2000ದ ಆದೇಶದಲ್ಲಿ ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಅರ್ಹ ಬಡ ಕುಟುಂಬಗಳಿಗೆ ಹಸಿರುಪಡಿತರ ಚೀಟಿಯನ್ನು ನೀಡಲಾಗುತ್ತಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್.ಎಸ್. ಘಾಟಿ ಮತ್ತು ಮಧುರೈ ಶನಿ ಮಹಾತ್ಮಾ ಸ್ವಾಮಿ ಮುಜರಾಯಿ ದೇವಸ್ಥಾನಗಳಿಂದ ಬರುವ ಆದಾಯ

2372(2826) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದೊಡ್ಡಬಳ್ಳಾಪುರ ತಾಲ್ಲೂಕಿನ ಎಸ್.ಎಸ್. ಘಾಟಿ ಮತ್ತು ಮಧುರೈ ಶನಿಮಹಾತ್ಮಸ್ವಾಮಿ ದೇವಸ್ಥಾನಗಳಿಂದ ಪ್ರತೀ ವರ್ಷ ಸರ್ಕಾರಕ್ಕೆ ಬರುವ ಆದಾಯವೆಷ್ಟು?

2. ಬರುವ ಆದಾಯವನ್ನು ಯಾವ, ಯಾವ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಲಾಗುತ್ತಿದೆ?

3. ಇದುವರೆವಿಗೂ ದೇವಸ್ಥಾನದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಯಾವುವು?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ಸದರಿ ದೇವಾಲಯಗಳ ವಾರ್ಷಿಕ ಸರಾಸರಿ ಆದಾಯ ಈ ಕೆಳಕಂಡಂತಿರುತ್ತದೆ.

1) ಶ್ರೀ ಶನಿಮಹಾತ್ಮ ದೇವಸ್ಥಾನ ಮಧುರೈ ರೂ. 13,85,867-00
2) ಶ್ರೀ ಘಾಟಿ ಸುಬ್ರಮಣ್ಯಸ್ವಾಮಿ ದೇವಸ್ಥಾನ, ಘಾಟಿ ರೂ. 39,21,185-00

ಈ ದೇವಾಲಯಗಳಿಂದ ಸರ್ಕಾರಕ್ಕೆ ಯಾವುದೇ ಆದಾಯ ಬರುವುದಿಲ್ಲ. ಆದರೆ ಶ್ರೀ ಘಾಟಿ ಸುಬ್ರಮಣ್ಯ ದೇವಾಲಯದ ವಾರ್ಷಿಕ ಆದಾಯದಲ್ಲಿ ಮಾತ್ರ ಶೇಕಡ 12ರಂತೆ ಮುಜರಾಯಿ ಸಿಬ್ಬಂದಿ ವಂತಿಗೆಯಲ್ಲಿ ಇಲಾಖೆಗೆ ಪಡೆಯಲಾಗುತ್ತದೆ. ಮಧುರೈ ಶ್ರೀ ಶನಿಮಹಾತ್ಮ ದೇವಾಲಯದ ಆಡಳಿತದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ವಂತಿಗೆಯನ್ನು ಸಂಗ್ರಹಿಸುವುದಿಲ್ಲ.

2. ಘಾಟಿ ಶ್ರೀ ಸುಬ್ರಹ್ಮಣ್ಯ ದೇವಾಲಯದ ಆದಾಯದಲ್ಲಿ ದೇವಾಲಯದ ನಿರ್ವಹಣೆ ಸಿಬ್ಬಂದಿ ವೇತನ, ಜಾತ್ರಾ ಉತ್ಸವಾದಿಗಳಿಗೆ ಮತ್ತು ಭಕ್ತಾದಿಗಳ ಮೂಲಭೂತ ಸೌಕರ್ಯಕ್ಕಾಗಿ, ಅಭಿವೃದ್ಧಿ ಕಾಮಗಾರಿಗಳಿಗೆ ಹಣವನ್ನು ವಿನಿಯೋಗಿಸಲಾಗುತ್ತದೆ. ಮಧುರೈ